

ಸಂಪಾದಕೀಯ

# ಪರಿಸರ ಮತ್ತು ನಾವು

"ಯಾರಿಗೂ ಪರಿಸರ ಕಾಳಜಿ ಇಲ್ಲ. ಕಾಡುಗಳು ಬರಿದಾಗುತ್ತಿವೆ. ಮಾಲಿನ್ಯ ಹೆಚ್ಚುತ್ತಿವೆ. ಮುಂದೊಂದು ದಿನ ಜಾಗತಿಕ ತಾಪಮಾನ ಎಲ್ಲ ಮಿತಿಯನ್ನೂ ಮೀರಿದರೆ ಭೂಮಿಯಲ್ಲಿ ಜೀವಸಂಕುಲ ಅಪಾಯಕ್ಕೊಳಗಾದೀತು. ಎಲ್ಲಾ ಅನಾಹುತಗಳಿಗೂ ಮಾನವನೇ ಕಾರಣ. ಇಡೀ ಪ್ರಪಂಚವನ್ನು ವಿನಾಶಕ್ಕೆ ಒಡ್ಡುವ ಮೊದಲು, ವಿವೇಚನೆಯಿಂದ ಪರಿಸರ ರಕ್ಷಣೆಗೆ ತೊಡಗುವುದು ಒಳಿತು'' — ಇದು ಯಾವುದೋ ಪರಿಸರವಾದಿಗಳ ಭಾಷಣವಲ್ಲ; ವಿಶ್ವ ಪರಿಸರ ದಿನಾಚರಣೆಯ ಘೋಷವಾಕ್ಯವೂ ಅಲ್ಲ. ಪರಿಸರ ಯಾವ ರೀತಿ ಕೆಡುತ್ತಾ ಹೋಗುತ್ತಿದೆ ಎಂದು ಗಮನಿಸಿದವರೆಲ್ಲರ ಒಮ್ಮತದ ಅಭಿಪ್ರಾಯ.

ಈ ರೀತಿ ಅಭಿಪ್ರಾಯ, ಚರ್ಚೆ, ಆತಂಕದ ನುಡಿಗಳನ್ನು ಹೇಳುತ್ತ ಕೇಳುತ್ತ ಎಷ್ಟೋ ವರ್ಷಗಳು ಸಂದಿವೆ. ನಮ್ಮ ಪರಿಸರ ರಕ್ಷಣೆ ಮಾಡಬೇಕು ಎಂಬ ಮಾತನ್ನು ಯಾರೂ ವಿರೋಧಿಸುವುದಿಲ್ಲ. ಮಾನವನ ನಿಸರ್ಗವಿರೋಧಿ ಜೀವನಕ್ರಮದಿಂದಾಗಿ ಇಡೀ ಪರಿಸರವೇ ತನ್ನ ಸಮತೋಲನವನ್ನು ಕಳೆದುಕೊಂಡು, ಜಗತ್ತು ವಿನಾಶದ ಅಂಚಿನಲ್ಲಿದೆ ಎಂಬ ಸತ್ಯವನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಇದನ್ನು ತಡೆಯಲು, ಮತ್ತೆ ಪರಿಸರದ ಸ್ಥಿತಿಗತಿಯನ್ನು ಉತ್ತಮಪಡಿಸಲು ಏನೇನು ಪ್ರಯತ್ನಗಳಾಗಿವೆ? ಪರಿಸರ ವಿಜ್ಞಾನಿಗಳ, ಕಾಳಜಿಯಿರುವ ಪ್ರಜ್ಞಾವಂತರ ಕೂಗು 'ಅರಣ್ಯರೋದನ'ವೇ ಆಗಿದೆ. ನಗರವಾಸಿಗಳು, ಆಧುನಿಕರು, ವಿಶೇಷವಾಗಿ ಉದ್ದಿಮೆದಾರರು ಅವರ ಕೂಗನ್ನು ಆಲಿಸುವುದೇ ಇಲ್ಲ. ಪರಿಣಾಮ? ಪ್ರತಿದಿನ ಮಾಧ್ಯಮಗಳಲ್ಲಿ ಓದುತ್ತೇವೆ- ಓಝೋನ್ ವಲಯದಲ್ಲಿ ಬಿರುಕು ಬಿದ್ದಿದೆ, ವಾಯುಮಾಲಿನ್ಯದಿಂದಾಗಿ ನಗರಗಳಲ್ಲಿ ಆರೋಗ್ಯಕರ ಪರಿಸರ ಇಲ್ಲದಾಗಿದೆ, ಉತ್ತರ-ದಕ್ಷಿಣ ಧ್ರುವಪ್ರದೇಶಗಳಲ್ಲಿ ಬೃಹತ್ ಹಿಮಗಡ್ಡೆಗಳು ಕರಗತೊಡಗಿವೆ, ಅತಿವೃಷ್ಟಿ-ಅನಾವೃಷ್ಟಿಗಳಿಂದ ಪ್ರಪಂಚದ ನೈಸರ್ಗಿಕ ಚಕ್ರ ಏರುಪೇರಾಗಿದೆ — ಇತ್ಯಾದಿ. ಇದರೊಂದಿಗೆ ಸದ್ದಿಲ್ಲದೆ ಎಕರೆಗಟ್ಟಲೆ, ಹೆಕ್ಟೇರ್‌ಗಟ್ಟಲೆ ಅರಣ್ಯ ನಾಶವಾಗುತ್ತಲೇ ಇದೆ. ಇದನ್ನೆಲ್ಲ ತಡೆಯಲಾಗುವುದಿಲ್ಲವೆ? ಇದಕ್ಕೆ ಪರಿಹಾರವೇನು? ಪರಿಹಾರ ಮಾಡುವವರಾದರೂ ಯಾರು? ದೇಶ, ಸರ್ಕಾರ, ಕಂಪೆನಿ ಅಥವಾ ಕಾನೂನುಗಳು ನಿಷ್ಕ್ರಿಯವಾಗಿವೆಯೆ? ದೇಶ-ದೇಶಗಳ ಜಗಳ, ವ್ಯಾಪಾರ-ವಹಿವಾಟು, ಯುದ್ಧ, ವಿಜ್ಞಾನ-ತಂತ್ರಜ್ಞಾನ ಹಾಗೂ ಆಧುನಿಕತೆ-ಇವುಗಳ ಭರಭರಾಟೆಯ ನಡುವೆ ಪ್ರಕೃತಿಮಾತೆಯ ದೀನರೋದನ ಯಾರಿಗೂ ಕೇಳಿಸದೇ ಹೋಯಿತೆ?

### ಪರಿಸರ ಕಾಳಜಿ: ಎಷ್ಟು ನಿಜ?

ಈ ಎಲ್ಲ ಸಮಸ್ಯೆಗಳನ್ನು ನಾವು ಮಾನವರು ಒಟ್ಟಾಗಿ ನೋಡಿ, ಗಮನಿಸಿ, ಎದುರಿಸಿ ಪರಿಹಾರ ಕಂಡುಕೊಳ್ಳುವುದರಲ್ಲಿ ಸೋತಿದ್ದೇವೆ ಅನ್ನಿಸುತ್ತದೆ. ಪರಿಸರ ವಿಜ್ಞಾನಿಗಳು ಸಂಶೋಧನೆ ಮಾಡಿ, ಆತಂಕಕಾರಿ ಪರಿಸ್ಥಿತಿಯನ್ನು ವರದಿ ಮಾಡುತ್ತಾರೆ. ಮಾಧ್ಯಮಗಳ ಮೂಲಕ ಅವು ಎಲ್ಲರ ಗಮನಕ್ಕೂ ಬರುತ್ತವೆ. ಆದರೆ, ಅವುಗಳನ್ನು ಗಂಭೀರವಾಗಿ ಪರಿಗಣಿಸಬೇಕಾದವರು ಮುಖ್ಯವಾಗಿ ಸರ್ಕಾರಗಳು ಮತ್ತು ಆಡಳಿತ ಪರಿಸರವನ್ನು ಕಡೆಗಣಿಸಿರುವುದು ಸರ್ವವಿದಿತ. ನಮ್ಮ ದೇಶದಲ್ಲಿ ಮೊದಲೇ ಅರಣ್ಯ ಪರಿಸರ ಎಷ್ಟು ಅಗತ್ಯವೋ ಅದಕ್ಕಿಂತ ಕಡಿಮೆ. ಅಳಿದುಳಿದ ಅರಣ್ಯ ಪ್ರದೇಶಗಳಲ್ಲೂ ಅರಣ್ಯರಕ್ಷಣೆಯ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ. ಪಶ್ಚಿಮ ಘಟ್ಟ, ಈಶಾನ್ಯ ರಾಜ್ಯಗಳ ದಟ್ಟ ಅರಣ್ಯಗಳಂಥ ಅತ್ಯಂತ ಅಪೂರ್ವ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಕೃಷಿ, ಇಂಧನ ಹಾಗೂ ಸಂಪನ್ಮೂಲಗಳ ಬಳಕೆಯ ನೆಪದಿಂದ ಪ್ರತಿದಿನ ಎಕರೆಗಟ್ಟಲೆ ಅರಣ್ಯಪ್ರದೇಶ ನಾಶವಾಗುತ್ತಿವೆ. ಇದು ಅಧಿಕಾರಿಗಳ ಗಮನಕ್ಕೆ ಬಾರದೆ ನಡೆಯುತ್ತಿದೆ ಎಂದು ಹೇಳಿ ಜಾರಿಕೊಳ್ಳುವಂತಿಲ್ಲ. ದೂರವ್ಯಾಪಕವಾಗಿ ನಡೆಯಬಲ್ಲ ಅನಾಹುತಗಳು, ಕಣ್ಣಮುಂದೆ ಎದುರಾಗುವ ಅನಿವಾರ್ಯ ಪರಿಸ್ಥಿತಿಯ ಮುಂದೆ ಮಬ್ಬಾಗಿ ಹೋಗಿವೆ ಎಂಬುದೇ ಇದಕ್ಕೆ ಉತ್ತರ. ಅರಣ್ಯ ಉತ್ಪನ್ನಗಳಿಗೆ ಎಷ್ಟೇ ಬೇಡಿಕೆಯಿರಲಿ, ಅರಣ್ಯ ನಾಶವನ್ನು ತಪ್ಪಿಸುವ ಸಲುವಾಗಿ ಅವುಗಳಿಗೆ ಬದಲಿ ವ್ಯವಸ್ಥೆ ಮಾಡುವುದು ಕಷ್ಟವಲ್ಲ.

ಆದರೆ ಪ್ರಭಾವಶಾಲಿ ಸರ್ಕಾರ, ಸಂಸ್ಥೆ, ಕಂಪೆನಿಗಳಿಗೆ ಅವು ಬೇಕಿಲ್ಲ. ಕಷ್ಟಪಡದೆ 'ಇಷ್ಟ'ವಾದುದನ್ನು ದಕ್ಕಿಸಿಕೊಳ್ಳಬೇಕು. ಪೈಪೋಟಿಯ ಯುಗದಲ್ಲಿ ಎಲ್ಲವೂ 'ಅನಿವಾರ್ಯ ಕಾರಣ ಕ್ಕಾಗಿ' ಆಗಲೇ ಬೇಕು. ಪರಿಣಾಮ: ಇನ್ನು ಪ್ರಪಂಚದಲ್ಲಿ ದಟ್ಟ ಅರಣ್ಯಗಳ, ಅನನ್ಯ ಜೀವಸಂಕುಲಗಳ ತಾಣವಾಗಿರುವ, ಇಡೀ ಭೂಮಂಡಲದ ನೈಸರ್ಗಿಕ ಸಮತೋಲನವನ್ನು ಕಾಯ್ದುಕೊಳ್ಳ ಬಲ್ಲ ಅಮೆಜಾನ್, ಬೋರ್ನಿಯೋ, ಕಾಂಗೋ ನದಿಯ ಬೃಹತ್ ಅರಣ್ಯ ಪ್ರದೇಶಗಳು ಅಪಾಯದಂಚಿನಲ್ಲಿವೆ. ಈ ಹಿನ್ನೆಲೆಯಲ್ಲಿ ಒಂದು ವಿಷಯವಂತೂ ಸ್ಪಷ್ಟವಾಗಿದೆ: ಪರಿಸರ ವಿನಾಶದ ಬಗ್ಗೆ ನಿಜವಾದ ಕಾಳಜಿಯಿರುವವರು ಕೆಲವೇ ಮಂದಿ; ಅವರ ಧ್ವನಿ ಎಲ್ಲರನ್ನೂ ತಲುಪುತ್ತಿಲ್ಲ. ಪರಿಸರ ರಕ್ಷಣೆಯ ಬಗ್ಗೆ ನಡೆಯುವ ಜಾಗತಿಕ ಸಮ್ಮೇಳನಗಳಲ್ಲಿ ವಿಶ್ವದ ನಾಯಕರುಗಳೆಲ್ಲ ಒಟ್ಟು ಸೇರಿ ಚರ್ಚಿಸುತ್ತಾರೆ; ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ. ಆದರೆ ಅದರಿಂದೇನೂ ಆಗುವುದಿಲ್ಲ. ಇದರರ್ಥ, ಅವರುಗಳ ಕಾಳಜಿಯು ನಿಜವಾದ ಕಾಳಜಿ ಅಲ್ಲವೇ ಅಲ್ಲ.

## ಮಾನವ ಮತ್ತು ನಿಸರ್ಗ

ಈ ಎಲ್ಲ ಸಮಸ್ಯೆಗಳ ಮೂಲವೆಲ್ಲಿ? ಹಿಂದೆ ಮಾನವನಿಗೆ ಈ ಸಮಸ್ಯೆ ಎದುರಾಗಿರಲಿಲ್ಲವೆ? ಯಾವಾಗ ಮಾನವ ಪರಿಸರದ ಬಗ್ಗೆ ಕಾಳಜಿ ವಹಿಸಲು ಆರಂಭಿಸಿದ?

ಹಿಂದೆ, ಸಮಸ್ಯೆಗಳು ಇನ್ನೂ ಎದುರಾಗಿರಲಿಲ್ಲ. ಮಾನವ ತನ್ನ ಜೀವನಕ್ಕಾಗಿ ಪ್ರಕೃತಿಯನ್ನು ಎಷ್ಟೇ ಅವಲಂಬಿಸಿದ್ದರೂ, ಅದು ಪ್ರಕೃತಿಯ ವಿನಾಶವಾಗುವ ಪ್ರಮಾಣದಲ್ಲಿ ಇರಲಿಲ್ಲ. ಆಧುನಿಕತೆ ಎಂಬುದು ಆರಂಭವಾದ ನಂತರ ಸ್ಪಷ್ಟವಾಗಿ ಪ್ರಕೃತಿಯ ಮೇಲೆ ಮಾನವನ ಸವಾರಿ ನಡೆಯಿತು. ಖಚಿತವಾಗಿ ಈ ಕಾಲದಲ್ಲೇ ಇದು ಆರಂಭವಾಯಿತು ಎಂದು ಹೇಳುವುದು ಸಾಧ್ಯವಿಲ್ಲದಿದ್ದರೂ, ಯೂರೋಪಿನಲ್ಲಿ ಉಂಟಾದ ವಿಜ್ಞಾನ-ತಂತ್ರಜ್ಞಾನ ಆವಿಷ್ಕಾರ, ಕೈಗಾರಿಕಾ ಕ್ರಾಂತಿ, ಹೊಸ ಭೂಪ್ರದೇಶ ಗಳ ಅನ್ವೇಷಣೆ, ವಸಾಹತುಗಳ ನಿರ್ಮಾಣ, ಪ್ರಪಂಚದೆಲ್ಲೆಡೆ ಕಾಲನಿಗಳನ್ನು ಸ್ಥಾಪಿಸಿ ಅಲ್ಲಿನ ಸಂಪನ್ಮೂಲಗಳನ್ನು ನಿರಂತರ ದೋಚಿದ ಬ್ರಿಟನ್‌ನಂಥ ದೇಶಗಳ ಮಿತಿಮೀರಿದ ಮಹತ್ವಾಕಾಂಕ್ಷೆ — ಇವೆಲ್ಲ ಪರಿಸರನಾಶಕ್ಕೆ ಪ್ರಧಾನ ಕೊಡುಗೆ ನೀಡಿವೆ. ಆಶ್ಚರ್ಯವೆಂದರೆ, ಜಾಗತಿಕ ಪರಿಸರ ನಾಶವಾಗುತ್ತಿದೆ ಎಂದು ಈಗ ಎಲ್ಲೆಡೆ ಡಂಗುರ ಸಾರುತ್ತಿರುವ ದೇಶಗಳೂ ಇವೇ ಆಗಿವೆ!

ಹಿಂದೆ ಕೃಷಿ ಪ್ರಧಾನವಾಗಿದ್ದ ದೇಶಗಳು ಸ್ವಾವಲಂಬಿ ಹಳ್ಳಿಗಳ ಜೀವನಕ್ರಮವನ್ನು ಪುರಸ್ಕರಿಸುತ್ತಿದ್ದವು. ಭಾರತದಂತಹ ದೇಶಗಳು ಜಾಗತಿಕ ಮಾರುಕಟ್ಟೆ, ವ್ಯವಹಾರಗಳಲ್ಲಿ ಹಿಂದಿದ್ದರೂ 'ಹಿಂದುಳಿದ' ಅಥವಾ 'ಮುಂದುವರಿಯುತ್ತಿರುವ' ದೇಶಗಳೆಂಬ ಹಣೆಪಟ್ಟಿ ಕಟ್ಟಿಸಿಕೊಂಡಿದ್ದರೂ, ಅವುಗಳ ಸಾಮಾಜಿಕ ಜನ ಜೀವನ ಕ್ರಮದಲ್ಲಿ ಪರಿಸರದೊಂದಿಗೆ ಸಾಮರಸ್ಯದಿಂದಿರುವ ವಿಧಾನವೇ ಹೆಚ್ಚು ವ್ಯಾಪಕವಾಗುತ್ತಿತ್ತು. ಆದರೆ ಆಧುನಿಕತೆ ಹೆಚ್ಚಾದಂತೆಲ್ಲ ಇದು ಬದಲಾಯಿತು; 'ಜಾಗತಿಕ ಮಾರುಕಟ್ಟೆ'ಯ ಕಲ್ಪನೆ ವಿಸ್ತಾರವಾಗಿ, ಬೃಹತ್ ಉದ್ದಿಮೆ-ಉತ್ಪನ್ನ-ವ್ಯವಹಾರಗಳು ಅನಿವಾರ್ಯವಾದವು. ಇದರೊಂದಿಗೆ ಇಡೀ ಪ್ರಪಂಚಕ್ಕೂ, ಪರಿಸರಕ್ಕೂ ಮಾರಕವಾಗಬಲ್ಲ ಅಣುಸ್ಥಾವರ ವಿದ್ಯುತ್ ಉತ್ಪಾದನೆಯ ವಿಧಾನ, ಅಣ್ವಸ್ತ್ರಗಳ ಪರೀಕ್ಷೆ ಮುಂತಾದವು ಸದ್ದಿಲ್ಲದೆ ನಡೆದವು; ಹಿರೋಶಿಮಾ-ನಾಗಸಾಕಿಯ ಅಣ್ವಸ್ತ್ರ ಪ್ರಯೋಗ; ಚರ್ನೋಬಿಲ್, ಭೋಪಾಲ್, ಫುಕುಶಿಮಾಗಳಂತಹ ದುರಂತಗಳು ಮಾನವ ತಂತ್ರಜ್ಞಾನ ಎಂತಹ ವಿಪತ್ತುಗಳನ್ನು ತಂದೊಡ್ಡಬಲ್ಲವು ಎಂಬ ಎಚ್ಚರಿಕೆಯನ್ನು ನೀಡಿದವು.

## ತ್ಯಾಜ್ಯ ವಸ್ತುಗಳು

ಆಧುನಿಕ ಯುಗದಲ್ಲಿ ಜಗತ್ತಿನೆಲ್ಲೆಡೆ ಉದ್ಭವಿಸಿರುವ ಇನ್ನೊಂದು ಸಮಸ್ಯೆಯೇ ತ್ಯಾಜ್ಯ ವಸ್ತುಗಳ ನಿರ್ವಹಣೆ. ಪ್ರತಿಯೊಂದು ನಗರದಲ್ಲೂ, ಕಾರ್ಖಾನೆಗಳ ಸಮೀಪದಲ್ಲೂ, ಜನನಿಬಿಡ ವಸತಿ ಪ್ರದೇಶಗಳಲ್ಲೂ ತ್ಯಾಜ್ಯ ವಸ್ತುಗಳು ಉತ್ಪನ್ನವಾಗುವುದು ಸಹಜ. ಆದರೆ ಅವುಗಳ ವ್ಯವಸ್ಥಿತ ನಿರ್ವಹಣೆ ಇಲ್ಲದಿದ್ದರೆ ಉದ್ಭವ ವಾಗುವ ಸಮಸ್ಯೆಗಳು ಅನೇಕ. ಗಂಗಾನದಿ ಹುಟ್ಟುವುದು ಗೋಮುಖದಲ್ಲಿ; ಅಲ್ಲಿಂದ ಹೃಷೀಕೇಶದವರೆಗೂ ನದಿಯ ನೀರು ಶುದ್ಧವಾಗಿದೆ. ಅಲ್ಲಿಂದ ಮುಂದಕ್ಕೆ ಎಲ್ಲೆಲ್ಲಿ ಪಟ್ಟಣಗಳಿವೆಯೋ, ಅಲ್ಲೆಲ್ಲ ತ್ಯಾಜ್ಯ ವಸ್ತುಗಳು, ಕಲುಷಿತ ನೀರು, ಕಾರ್ಖಾನೆಗಳು ಹರಿಸುವ ಕೊಳೆ ಪದಾರ್ಥಗಳು ಗಂಗಾನದಿಯನ್ನು ಮಲಿನಗೊಳಿಸುತ್ತವೆ. ಗಂಗಾಮಾತೆ ಗಂಗಾಸಾಗರದಲ್ಲಿ ಬಂಗಾಳ ಕೊಲ್ಲಿಯನ್ನು ಸೇರುವಾಗ ಅದೆಷ್ಟು ಕೊಳೆ, ಮಾಲಿನ್ಯ, ಕಲ್ಮಶಗಳನ್ನು ಹೊತ್ತು ಕೊಂಡು ಸಾಗುತ್ತಾಳೋ! ಜಗತ್ತಿನ ಅತಿಪಾವನ ನದಿಯೆನಿಸಿರುವ ಗಂಗೆ ಇಷ್ಟೊಂದು ಹಿಂಸೆಗೊಳಗಾಗಬೇಕೆ?

ಪ್ಲಾಸ್ಟಿಕ್ ಆವಿಷ್ಕಾರದೊಂದಿಗೆ ಅದು ಪರಿಸರಕ್ಕೆ ಮತ್ತೊಂದು ಮಾರಕವಸ್ತುವಾಗಿ ಪರಿಣಮಿಸಿತು. ಗೃಹಕೃತ್ಯದ ಬಳಕೆ, ಪ್ಲಾಸ್ಟಿಕ್ ಬ್ಯಾಗುಗಳು, ನಾನಾ ಬಗೆಯ ಸಲಕರಣೆಗಳು — ಇವೆಲ್ಲ ಪ್ರಕೃತಿಯಲ್ಲಿ ಒಂದಾಗದೆ, ನಿಧಾನವಾಗಿ ವಿಷವನ್ನು ಉಗುಳುವ ವಸ್ತುಗಳಾಗಿವೆ. 'ಇಟ್ಟರೂ ವಿಷ, ಸುಟ್ಟರೂ ವಿಷ' ಎಂಬುದು ಪ್ಲಾಸ್ಟಿಕ್‌ನ ಮಹಿಮೆ! ಇದೇ ರೀತಿ ಬ್ಯಾಟರಿ, ಇಂಧನ, ರಾಸಾಯನಿಕ ಗೊಬ್ಬರ ಮುಂತಾದವುಗಳಿಂದಲೂ ನಿಸರ್ಗ ಕಲುಷಿತ ಗೊಳ್ಳುತ್ತಿದೆ. ನಾವೆಲ್ಲರೂ ಶುಚಿಯಾಗಿ, ಸುಖವಾಗಿ, ಆನಂದ ದಿಂದ ಇರಬಯಸುತ್ತೇವೆ. ಹೀಗಿರಬೇಕಾದರೆ ನಮ್ಮ ಸುತ್ತಣ ಪರಿಸರವೂ ಅಷ್ಟೇ ಸ್ವಚ್ಛವಾಗಿ, ಶುದ್ಧವಾಗಿ, ಮಾಲಿನ್ಯವಿಲ್ಲದೆ ಇರುವುದು ಮುಖ್ಯವೆಂದು ಏಕೆ ಮರೆಯುತ್ತೇವೆ?

ಹಲವು ಮುಂದುವರಿದ ದೇಶಗಳಲ್ಲಿ ತ್ಯಾಜ್ಯ ವಸ್ತುಗಳ ಸಮರ್ಪಕ ನಿರ್ವಹಣೆಯಿಂದ, 'ಕಸದಿಂದ ರಸವನ್ನು ನಿರ್ಮಿಸುವ' ಚಾಕಚಕ್ಯತೆಯಿಂದ ಅನೇಕ ಸುಧಾರಣೆಗಳಾಗಿವೆ.

ವಿಜ್ಞಾನ, ಆವಿಷ್ಕಾರಗಳು ಇಂತಹ ಮಾರ್ಪಾಡುಗಳನ್ನು ಹೆಚ್ಚು ವ್ಯಾಪಕವಾಗಿ ಮಾಡಬೇಕು. ಇಂಥ ಸುಧಾರಣೆಗಳು ಕೇವಲ ಜಪಾನ್, ಅಮೆರಿಕ ಮಾತ್ರವಲ್ಲ ; ಜಗತ್ತಿನ ಎಲ್ಲ ದೇಶಗಳಲ್ಲೂ ಬಳಕೆಗೆ ಬರಬೇಕು.

### ಹಸಿರು ವನ, ವೃಕ್ಷ ಹಾಗೂ ಭೂಮಿ

ಪರಿಸರ ಕಾಳಜಿ, ಚಿಂತನೆ, ಬದ್ಧತೆಗಳಿರುವ ಅನೇಕ ಮಂದಿ, ಸಂಘ-ಸಂಸ್ಥೆಗಳು ಅನೇಕ ಪ್ರಯತ್ನಗಳ ಮೂಲಕ ಭೂಮಿಯ ಹಸಿರು ಸಂಪತ್ತನ್ನು ಉಳಿಸಲು, ಮತ್ತಷ್ಟು ಹೆಚ್ಚಿಸಲು ಕಟಿಬದ್ಧರಾಗಿದ್ದಾರೆ. ಅವರ ಅನೇಕ ಕೆಲಸಗಳು ಅಭೂತಪೂರ್ವ ಯಶಸ್ಸನ್ನು ತಂದುಕೊಟ್ಟಿದೆ. ಆದರೂ ಜಾಗತಿಕ ತಾಪಮಾನದ ಏರಿಕೆ, ಪರಿಸರ ಮಾಲಿನ್ಯ ಎಷ್ಟು ದೊಡ್ಡ ಪ್ರಮಾಣದಲ್ಲಿ ಎಲ್ಲೆಡೆ ನಡೆಯುತ್ತಿದೆಯೆಂದರೆ, ಕೆಲವೇ ಕೆಲವು ಮಂದಿ ಮಾಡುವ ಪ್ರಯತ್ನಗಳು ನಗಣ್ಯವೆನಿಸಿವೆ. ೨೦೧೯-೨೦೨೦ ಅವಧಿಯ ಕೋವಿಡ್-೧೯ ಸಾಂಕ್ರಾಮಿಕದಿಂದಾಗಿ ಇಡೀ ಜಗತ್ತೇ ತಲ್ಲಣಿಸಿತು. ಈ ಸಂದರ್ಭದಲ್ಲಿ ನಡೆದ ಲಾಕ್‌ಡೌನ್‌ನಿಂದಾಗಿ ಪರಿಸರ ನಾಶ ತುಸು ಕಡಿಮೆಯಾಯಿತು; ಆದರೆ ಅದರಿಂದಾದ ಪರಿಣಾಮ ಮಾತ್ರ ಅದ್ಭುತ! ವಾಯುಮಾಲಿನ್ಯ ಅಧಿಕವಾಗಿದ್ದ ದೆಹಲಿಯಂತಹ ನಗರ ಕೂಡ ಸ್ವಚ್ಛ ಗಾಳಿಯಿಂದ ಕಂಗೊಳಿಸುವಂತಾಯಿತು. ರಸ್ತೆ ನಡುವೆ ಚಿರತೆ, ಆನೆಗಳು ನಿರ್ಭಯವಾಗಿ ನಡೆದಾಡುವಂತಾಯಿತು, ಆದರೆ, ಪ್ರಕೃತಿಮಾತೆ ಬಲವಂತವಾಗಿ ಪ್ರಾಕೃತಿಕ ಸಮತೋಲನ ಕಾಪಾಡುವಂತೆ ಮಾಡಲು ನಾವು ಕಾಯಬೇಕೆ? 'ಎಲ್ಲವನ್ನೂ ಮಾಡಬಲ್ಲವನು' ಎಂಬ ಅಹಂಕಾರ ಹೊಂದಿರುವ ಮಾನವನು ಈ ಸಂರಕ್ಷಣೆಯ ಕಾರ್ಯದಲ್ಲಿ ಸೋತುಹೋದನೆ?

ಹಿಂದೊಂದು ಕಾಲವಿತ್ತು. ಭೂಮಿಯೆಲ್ಲಡೆ ಅರಣ್ಯಭೂಮಿ, ಸ್ವಚ್ಛಂದ ಪ್ರಾಣಿಪಕ್ಷಿಗಳು ಸಮೃದ್ಧಿಯಾಗಿದ್ದವು. ನಿಸರ್ಗದ ಜೀವನಚಕ್ರ ಆತಂಕವಿಲ್ಲದೆ ನಡೆಯುತ್ತಿತ್ತು. ಮಾನವನೂ ಅದರಲ್ಲಿ ಒಂದಾಗಿದ್ದ. ಪರಿಸರದೊಂದಿಗೆ ಸಾಮರಸ್ಯದಿಂದ ಅವನು ಜೀವಿಸುತ್ತಿದ್ದ. ಅನಂತರ ಗ್ರಾಮಜೀವನ, ಕೃಷಿ, ವ್ಯವಹಾರ ಇವೆಲ್ಲ ಬೆಳೆದಂತೆ ಮಾನವಸಂತತಿಯೂ ವೃದ್ಧಿಸಿತು. ಸಹಜವಾಗಿ ಅರಣ್ಯಗಳ ನಾಶ ಆರಂಭವಾಯಿತು. ಆದರೂ ಅದು ಮಾನವ ಜೀವನಕ್ಕೆ ಮಾರಕವಾಗುವಷ್ಟು ದೊಡ್ಡ ಪ್ರಮಾಣದಲ್ಲಿರಲಿಲ್ಲ. ವಿಜ್ಞಾನ-ತಂತ್ರಜ್ಞಾನ-ಕಾರ್ಖಾನೆಗಳು ಹೆಚ್ಚಿದವು; ವಾಣಿಜ್ಯ-ವ್ಯಾಪಾರ, ಪೈಪೋಟಿ, ನಗರೀಕರಣ ವ್ಯಾಪಕಗೊಂಡಿತು — ಈಗ ನಿಸರ್ಗದ ಮೇಲಿನ ಆಕ್ರಮಣ ಅವ್ಯಾಹತವಾಗಿ ನಡೆಯಿತು.

ಈಗ ಮತ್ತೆ ನಿಸರ್ಗದ ಮೂಲಸ್ಥಿತಿಗೆ ಅದನ್ನು ಮರಳಿಸಲು ಸಾಧ್ಯವೆ? ಕಡಿದುರುಳಿಸಿದ ಮರದ ಜಾಗದಲ್ಲಿ ಹೊಸ ಗಿಡವನ್ನು ನೆಡಬಹುದೆ?

ನೆಲ, ಜಲ, ಪ್ರಾಣಿಪಕ್ಷಿಗಳೊಂದಿಗೆ ಮಾನವ ನಲಿದಾಡುತ್ತ ಬದುಕುವುದು ಅತ್ಯಂತ ಸಮೃದ್ಧ ಜೀವನದ ಲಕ್ಷಣ. ಅನ್ನಾಹಾರ, ಸಂಸ್ಕೃತಿ, ಆಮೋದ-ಪ್ರಮೋದಗಳು ಒಟ್ಟು ಪ್ರಪಂಚದ ಜೀವನಕ್ಕೆ ಮಾರಕವಾಗದಿರಲಿ. ನಮ್ಮ ಇತಿಹಾಸ, ಸಂಸ್ಕೃತಿ, ಧರ್ಮ, ಪರಂಪರೆಗಳಲ್ಲಿ ನಿಸರ್ಗದೊಂದಿಗೆ ಸಾಮರಸ್ಯದಿಂದ ಬದುಕುವ ವಿಚಾರಧಾರೆಗಳು ವಿಪುಲವಾಗಿವೆ. ನಮಗೆ ನದಿ, ಪರ್ವತ, ಕಾಡು, ಪ್ರಾಣಿ-ಪಕ್ಷಿಗಳು, ಕಲ್ಲುಬಂಡೆ — ಪ್ರತಿಯೊಂದೂ ದೇವರೇ ; ಎಲ್ಲವೂ ಪೂಜ್ಯವೇ. ಇಂಥ ಭಾವನೆಗಳನ್ನು ಪರಿಸರ ಸಂರಕ್ಷಣೆಗಾಗಿ ಬಳಸಿಕೊಳ್ಳೋಣ. ಸ್ವಚ್ಛತೆ, ಸಮೃದ್ಧಿ, ಆನಂದಗಳು ನಮ್ಮಲ್ಲಿ ಇರಬೇಕಾದರೆ ನಮ್ಮ ಸುತ್ತಮುತ್ತಲೂ ಅವು ಇರುವಂತೆ ನೋಡಿಕೊಳ್ಳಬೇಕು. ಮಕ್ಕಳಿಗೆ ಬಾಲ್ಯದಿಂದಲೂ ಇಂಥ ಅರಿವನ್ನು ಮೂಡಿಸುವ ಪಠ್ಯಕ್ರಮವನ್ನು ಶಿಕ್ಷಣ ವ್ಯವಸ್ಥೆ ಜಾರಿಗೆ ತರಬೇಕು. ಪಾಲಕರು, ಹೆತ್ತವರು ಕೂಡ ಮಕ್ಕಳಲ್ಲಿ ಈ ಅರಿವನ್ನು ಮೂಡಿಸಲು ಪ್ರಜ್ಞಾಪೂರ್ವಕವಾಗಿ ಯತ್ನಿಸಬೇಕು.

ಇದರೊಂದಿಗೆ, ನಗರಕೇಂದ್ರಿತ ಜೀವನಶೈಲಿಗೆ ಮಾರುಹೋಗುವ ಯುವಜನಾಂಗವನ್ನು ಕೃಷಿಕೇಂದ್ರಿತವಾದ, ನಿಸರ್ಗದೊಂದಿಗೆ ಸಾಮರಸ್ಯದಿಂದ ಬಾಳುವ ಜೀವನದತ್ತ ಆಕರ್ಷಿಸುವಂತೆ ಮಾಡಬೇಕು. ಸ್ವಚ್ಛ ಗಾಳಿ, ನೀರು, ಆಹಾರಗಳು ಸಮೃದ್ಧವಾಗಿದ್ದರೆ ಮಾತ್ರ ನಮ್ಮ ಆರೋಗ್ಯ ಉತ್ತಮಗೊಳ್ಳುವುದು.

### ವೈಯಕ್ತಿಕ ನಿಲುವು, ಪ್ರಯತ್ನ

''ಜಾಗತಿಕವಾಗಿ ಇಷ್ಟೆಲ್ಲ ತೊಂದರೆಗಳಾಗುತ್ತಿರುವಾಗ ನಾವು ಏನು ಮಾಡಲು ಸಾಧ್ಯ ? ನಾನೊಬ್ಬ ಬಾಯಿ ಬಡಿದುಕೊಂಡರೆ ಏನಾಗುತ್ತದೆ?'' ಎಂದು ಕೆಲವರಿಗೆ ಅನ್ನಿಸುವುದು ಸಹಜ. ಆದರೆ ಇಡೀ ಪ್ರಪಂಚದಲ್ಲಿ, ಮಾನವ ಜನಾಂಗದಲ್ಲಿ ಆಗುವ ಬದಲಾವಣೆಗಳೆಲ್ಲವೂ ಒಬ್ಬೊಬ್ಬ ವ್ಯಕ್ತಿ ಸೇರಿ ಆಗಿರುವ ಕಾರ್ಯಗಳು ಎಂಬುದನ್ನು ನಾವು ಮರೆಯಬಾರದು. 'ಹನಿಗೂಡಿ ಹಳ್ಳ' ಎಂಬಂತೆ, ವ್ಯಕ್ತಿ ವ್ಯಕ್ತಿ ಸೇರಿ ಸಮಾಜ, ಮಾನವ ಜನಾಂಗ. ಕನಿಷ್ಠಪಕ್ಷ ನಾವೆಲ್ಲರೂ ಪರಿಸರಪ್ರೇಮ, ನಿಸರ್ಗವನ್ನು ಕುರಿತ ಕಾಳಜಿ, ಜಗತ್ತಿನ ಪರಿಸರವನ್ನು ಕುರಿತ ಅರಿವು — ಇವನ್ನು ಹೊಂದಿದ್ದರೂ ಸಾಕು. ಬರೀ 'ವನಮಹೋತ್ಸವ' ಆಚರಣೆಯ ದಿನದಲ್ಲಿ ಒಂದು ಗಿಡವನ್ನು ನೆಟ್ಟರೆ ಸಾಕೆ? ನಿಸರ್ಗದ ಮೇಲೆ ನಮ್ಮ ಪ್ರೀತಿ ನಮ್ಮ ಅಂತರ್ಯದಿಂದ ಉಕ್ಕಿ ಬರಲಿ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಹಸಿರನ್ನು ಹಬ್ಬಿಸೋಣ. ಪ್ರತಿದಿನವೂ 'ವನಮಹೋತ್ಸವ'ವೇ ನಡೆಯಲಿ. ಎಲ್ಲ ವ್ಯಕ್ತಿಗಳೂ ಪ್ರಯತ್ನಪಟ್ಟರೆ, ಇಡೀ ಭೂಮಂಡಲವನ್ನು ಮತ್ತೆ ಹಸಿರಿನಿಂದ ಮುಚ್ಚಲು ಸಾಧ್ಯವಿಲ್ಲವೆ? — ಕನಸು ಬಹುದೂರದ್ದು ನಿಜ. ಆದರೂ ನಾವೆಲ್ಲ ಪ್ರಯತ್ನಿಸಬಹುದು. ✽

**ಜೂನ್ ತಿಂಗಳ ಕಾರ್ಯಕ್ರಮಗಳು**

| | | |
|---|---|---|
| ೧೦ | ಶುಕ್ರವಾರ | ಏಕಾದಶಿ |
| ೨೪ | ಶುಕ್ರವಾರ | ಏಕಾದಶಿ |